<u>ದಿಃ05.12.2022 O S No.8/2015 PW-1</u>

ದಿಃ05.12.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಬಿ ಕೆ ವಕೀಲರಿಂದ</u>

ಸ್ಥಳದ ನೈಜ ಸ್ಥಿಯನ್ನು ತೋಪರಿಸಲು ಪ್ರತಿವಾದಿಗಳು ಕಚ್ಚಾ ನಕ್ಷೆಯನ್ನು ಅಸಲು ದಾವಾ ಸಂಖ್ಯೆ 162/1998 ರಲ್ಲಿ ಸಲ್ಲಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ಗೂಳೀಗೌಡರ ಮನೆಯ ದಕ್ಷಿಣ ದಕ್ಕಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪಶ್ಚಿಮ ದಿಕ್ಕಿನ ರಸ್ತೆಯಿಂದ ಗೂಳೀಗೌಡರ ಮನೆಗೆ ಮತ್ತು ಪ್ರತಿವಾದಿಗಳ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿದೆ ಎಂದರೆ ಸಾಕ್ಷಿ ಗೂಳೀಗೌಡರ ಮನೆಯಿಂದ ವಿದ್ಯುತ್ ಸಂಪರ್ಕ ಮಾಡಿಕೊಂಡಿದ್ದಾರೆ. ಗೂಳೀಗೌಡರಿಗೂ ಪ್ರತಿವಾದಿಗಳಿಗೂ ಬೇರೆ ಬೇರೆ ವಿದ್ಯುತ್ ಸಂಪರ್ಕ ಇದೆ ಎಂದರೆ ಸರಿ. ನಿಮ್ಮ ಮನೆಯ ಪೂರ್ವ ದಿಕ್ಕಿಗೆ ತಿರುಗಾಡುವ 9 ಅಡಿ ದಾರಿ ಇದೆ ಎಂದರೆ ಸಾಕ್ಷಿ ಅದು ನಮ್ಮದೇ ಜಾಗ ಎಂದು ನುಡಿಯುತ್ತಾರೆ. ಇದೇ ದಾರಿಯಲ್ಲಿ ಪ್ರತಿವಾದಿಗಳು ಮತ್ತು ಗೂಳೀಗೌಡರು ನೀರಿನ ಸಂರ್ಪಕವನ್ನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಸಂರ್ಪಕ ಕಲ್ಪಿಸುವ ಸಮಯದಲ್ಲಿ ನಾನು ತಕರಾರು ಮಾಡಿದ್ದೆ, ಸಂರ್ಪಕವಿರುವುದು ನಿಜ ಆದರೆ ಜಾಗ ನನಗೆ ಸೇರಿದ್ದು ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಪಶ್ಚಿಮ ದಿಕ್ಕಿನ ಉತ್ತರದ ಮೂಲೆಯಲ್ಲಿ 9 X 9 ಅಡಿ ಅಳತೆ ಜಗಲಿಯನ್ನ ಪ್ರತಿವಾದಿಗಳು ಉಳಿಸಿಕೊಂಡು ದಾವಾ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. 36 X 28 ಅಡಿಗಳ ಬದಲಾಗಿ ಮೊಳ ಎಂದು ತಪ್ಪಾಗಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. 9 X 9 ಅಡಿಗಳಲ್ಲಿ ರಾಮಲಿಂಗಯ್ಯನವರು ಬದುಕಿದ್ದ ಕಾಲದಲ್ಲಿಯೇ ಕಟ್ಟಡ ಕಟ್ಟಡಲು ಪರವಾನಿಗೆಯನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಪಶ್ಚಿಮ ದಿಕ್ಕಿನಿಂದ ದಾವಾ ಷೆಡ್ಯೂಲ್ ಸ್ವತ್ತಿನ ಮನೆಯ ಒಳಗಡೆ ಹೋಗಬೇಕಾದರೆ ಉತ್ತರ ದಿಕ್ಕಿನ

ಮುಂಭಾಗದಲ್ಲಿಯೇ ಸದರಿ 9 X 9 ಅಡಿ ಜಾಗವನ್ನು ಉಳಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಮೊದಲಿಗೆ ತೆಂಗಿನ ಗರಿ ಷೆಡ್ಡನ್ನು ಹಾಕಿಕೊಂಡಿದ್ದರು ಎಂದರೆ ಹೌದು ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಪಂಚಾಯ್ತಿಯಿಂದ ಪರವಾನಿಗೆ ಪಡೆದುಕೊಂಡ ನಂತರ ಸೀಟಿನ ಷೆಡ್ಡನ್ನು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ 9 X 9 ಅಡಿ ಜಗಲಿಪಿ ಜಾಗವನ್ನು ನೀವು ಸೇರಿಸಿಕೊಂಡು ನಿಮ್ಮ ಹೆಸರಿಗೆ ಖಾತೆಯನ್ನು ಸೃಷ್ಟಿಸಿಕೊಂಡಿದ್ದೀರಾ ಎಂಂದರೆ ಸರಿಯಲ್ಲ. ಖಾತಾ ಮಾಡಿಕೊಂಡ ನಂತರ ಪಂಚಾಯ್ತಿ ರವರು ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿ, ಪಂಚಾಯ್ತಿ ನಡವಳಿಕೆಯು ಸಹ ಆಗಿದೆ ಎಂದರೆ ಸರಿಯಲ್ಲ. 9 X 9 ಅಡಿಗಳಿಗೆ ಸಂಬಂಧಿಸಿದಂತೆ ನಿಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರು ಸಹ ಸುಳ್ಳು ಖಾತೆಯನ್ನು ಸೃಷ್ಟಿ ಮಾಡಿಕೊಂಡು, ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.